ಓಎಸ್. 522/18 ಪಿಡಬ್ಲ್ಯೂ1

ದಿನಾಂಕಃ 03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಎನ್.ಆರ್. ವಕೀಲರಿಂದಃ

ಸುಮಾರು 5-6 ವರ್ಷಗಳ ಹಿಂದೆ 1ನೇ ಪ್ರತಿವಾದಿ ಮೃತರಾಗಿರುತ್ತಾರೆ. ಸುಮಾರು 2 ವರ್ಷಗಳ ಹಿಂದೆ 2ನೇ ಪ್ರತಿವಾದಿ ಮೃತರಾಗಿರುತ್ತಾರೆ. ನನ್ನ ಮದುವೆ 50 ವರ್ಷಗಳ ಹಿಂದೆ ಆಗಿದ್ದು, ನನ್ನ ಮದುವೆಯ ಎರಡು ತಿಂಗಳ ನಂತರ ನನ್ನ ತಾಯಿ ಮೃತರಾಗಿರುತ್ತಾರೆ. ಸುಮಾರು 40 ವರ್ಷಗಳ ಹಿಂದೆ ನನ್ನ ತಂದೆ ಮೃತರಾಗಿರುತ್ತಾರೆ. ನನ್ನ ತಂದೆ ಜೀವಂತ ಇರುವಾಗ 1983 ರಲ್ಲಿ ಬಾಯಿ ಮಾತಿನ ಪಾಲು ವಿಭಾಗದಲ್ಲಿ ದಾವಾ ಆಸ್ತಿಗಳನ್ನು 1 ಮತ್ತು 2ನೇ ಪ್ರತಿವಾದಿಗಳಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ 1 ಮತ್ತು 2ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಪ್ರತ್ಯೇಕ ಸ್ವಾಧೀನತೆ ಹೊಂದಿದ್ದು, ಸದರಿಯವರ ಮರಣ ನಂತರ ಅವರ ವಾರಸುದಾರರು ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೌಖಿಕ ಪಾಲು ವಿಭಾಗದಂತೆ ಎಂ.ಆರ್. ಸಂಖ್ಯೆ07/1986-87ನ ಮತ್ತು 07/1988-89 ರಂತೆ 1 ಮತ್ತು 2ನೇ ಪ್ರತಿವಾದಿಯಹೆಸರಿಗೆ ಖಾತಗಳು ವರ್ಗಾವಣೆ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಗಳು ವರ್ಗಾವಣೆ ಆದ ದಿನದಿಂದ 1 ಮತ್ತು 2ನೇ ಪ್ರತಿವಾದಿಗಳು ಪ್ರತ್ಯೇಕ ಸ್ವಾಧೀನತೆ ಹೊಂದಿ ತೆರಿಗೆ ಪಾವತಿಸುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮತ್ತು 2ನೇ ವಾದಿಯ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಮದುವೆಯ ಸಮಯದಲ್ಲಿ 1 ಮತ್ತು 2ನೇ ಪ್ರತಿವಾದಿಗಳು ಇನ್ನೂ ಮದುವೆ ಆಗಿರಲಿಲ್ಲ ಎಂದರೆ ಸರಿ. ನನ್ನ ತಂದೆ ಆಸ್ತಿಯಲ್ಲಿ ಪಾಲು ನೀಡುವ ಬದಲು ನನಗೆ ಮತ್ತು 2ನೇ ವಾದಿಗೆ ಮದುವೆಯ ಸಮಯದಲ್ಲಿ ಹಣ ಮತ್ತು ಒಡವೆಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. 1975 ರಲ್ಲಿ ನನ್ನ ಮದುವೆಯಾಗಿದ್ದು, 1980 ರಲ್ಲಿ 2ನೇ ವಾದಿಯ ಮದುವೆ ಆಗಿರುತ್ತದೆ ಎಂದರೆ ಸರಿ. 1983 ರಲ್ಲಿ ಮೌಖಿಕ ಪಾಲು ವಿಭಾಗವಾಗುವಾಗ ನನ್ನನ್ನು ಮತ್ತು 2ನೇ ವಾದಿಯನ್ನು ಕರೆಯಿಸಿ ನಮಗೆ ಬರಬೇಕಾದ ಆಸ್ತಿಯಲ್ಲಿನ ಪಾಲಿನ ಬದಲಾಗಿ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು 2ನೇ ವಾದಿ ಆ ರೀತಿ ಹಣ ಪಡೆದುಕೊಂಡಿದ್ದರಿಂದ 2018ರವರೆಗೂ ಯಾವುದೇ ದಾವೆ ಹಾಕದೇ ಸುಮ್ಮನಿದ್ದೆವು ಎಂದರೆ ಸರಿಯಲ್ಲ. ಈಗ ಆಸ್ತಿಗಳ ಬೆಲೆ ಹೆಚ್ಚಾಗಿದ್ದು, ಪ್ರತಿವಾದಿಗಳಿಂದ ಹಣ ಪಡೆದುಕೊಳ್ಳುವ ದುರುದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು, 2ನೇ ವಾದಿ, 2, 4, 6, 7 ಮತ್ತು 9 ನೇ ಪ್ರತಿವಾದಿಗಳು ಈ ಹಿಂದೆ ಮೂಲ ದಾವೆ ಸಂಖ್ಯೆ 43/2015 ರಂತೆ ದಾವೆ ಹೂಡಿದ್ದೆವು ಎಂದರೆ ಸಾಕ್ಷಿ ಸದರಿ ದಾವೆಯನ್ನು ಚಿನ್ನಮ್ಮರವರು ಹೂಡಿದ್ದರು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.